ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**


ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ        ದಿನಾಂಕ : DATE : 22/01/2020

# ಅನರ್ಹತೆ ನಿರ್ಧಾರ ಅಧಿಕಾರ ಸ್ಪೀಕರ್‌ಗೆ ಬೇಡ: ಸುಪ್ರೀಂ

## ವಿಧಾನ ಸಭಾಧ್ಯಕ್ಷರು ಕೂಡ ರಾಜಕೀಯ ಪಕ್ಷಕ್ಕೆ ಸೇರಿದವರು ನ್ಯಾಯಾಧಿಕರಣ ರಚನೆಗೆ ಚಿಂತಿಸಿ: ಕೇಂದ್ರ ಸರ್ಕಾರಕ್ಕೆ ಸಲಹೆ



ನವದೆಹಲಿ: 'ಸಭಾಧ್ಯಕ್ಷರೂ ಒಂದು ರಾಜಕೀಯ ಪಕ್ಷಕ್ಕೆ ಸೇರಿದವರಾಗಿರುತ್ತಾರೆ. ಹೀಗಾಗಿ ಸಂಸದ-ಶಾಸಕರ ಅನರ್ಹತೆ ನಿರ್ಧರಿಸುವ ಹೊಣೆಯನ್ನು ಸ್ಪೀಕರ್ ಬದಲಿಗೆ ಸುಪ್ರೀಂಕೋರ್ಟ್ ಅಥವಾ ಹೈಕೋರ್ಟ್ ನಿವೃತ್ತ ನ್ಯಾಯಾಧೀಶರ ನೇತೃತ್ವದ ಕಾಯಂ ನ್ಯಾಯಾಧಿಕರಣಕ್ಕೆ ವಹಿಸುವ ಸಂಬಂಧ ಸಂವಿಧಾನಕ್ಕೆ ತಿದ್ದುಪಡಿ ತರಲು ಸಂಸತ್ತು ಗಂಭೀರ ಚಿಂತನೆ ನಡೆಸಬೇಕು' ಎಂದು ಸರ್ವೋಚ್ಚ ನ್ಯಾಯಾಲಯ ಮಹತ್ವದ ಸಲಹೆ ನೀಡಿದೆ.

ಮಣಿಪುರದಲ್ಲಿ ಕಾಂಗ್ರೆಸ್‌ನಿಂದ ಬಿಜೆಪಿಗೆ ಜಿಗಿದ ಸಚಿವ ಶ್ಯಾಮಕುಮಾರ್ ಅವರ ಅನರ್ಹತೆ ಕೋರಿ ಇಬ್ಬರು ಕಾಂಗ್ರೆಸ್ ಶಾಸಕರು ಸ್ಪೀಕರ್‌ಗೆ ಅರ್ಜಿ ಸಲ್ಲಿಸಿದ್ದರು. ಆದರೆ ಸ್ಪೀಕರ್ ವಿಳಂಬ ಮಾಡುತ್ತಿರುವ ಕಾರಣ, ಅದನ್ನು ಪ್ರಶ್ನಿಸಿ ಅವರು ಸುಪ್ರೀಂ ಗೆ ಅರ್ಜಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸುವ ಸಂದರ್ಭದಲ್ಲಿ ನ್ಯಾ। ರೋಹಿಂಟನ್ ನಾರಿಮನ್ ನೇತೃತ್ವದ ತ್ರಿಸದಸ್ಯ ಪೀಠ, ಈ ಮಹತ್ವದ ಸಲಹೆಯನ್ನು ನೀಡಿದೆ.

'ಸ್ಪೀಕರ್ ಕೂಡ ಒಂದು ರಾಜಕೀಯ ಪಕ್ಷಕ್ಕೆ ಸೇರಿರುತ್ತಾರೆ. ಅಲ್ಲದೆ, ಇತ್ತೀಚಿನ ಕೆಲವು ಪ್ರಕರಣಗಳನ್ನು ಗಮನಿಸಿದಾಗ ಸ್ಪೀಕರ್ ಅವರ ಸ್ವಾತಂತ್ರ್ಯದ ಬಗ್ಗೆ ಪದೇ ಪದೇ ಪ್ರಶ್ನೆಗಳನ್ನು ಎತ್ತಲಾಗುತ್ತಿದೆ. ಹಾಗಾಗಿ ಶಾಸಕ, ಸಂಸದರ ಅನರ್ಹತೆಯನ್ನು ಸ್ಪೀಕರ್ ಬದಲಿಗೆ ಸ್ವತಂತ್ರ ಸಂಸ್ಥೆಗೆ ವಹಿಸುವುದು ಸೂಕ್ತ ಎಂದು ಪೀಠ ಹೇಳಿತು.

**3 ತಿಂಗಳಲ್ಲಿ ಅನರ್ಹತೆ ನಿರ್ಧರಿಸಬೇಕು:** 'ಒಂದು ವೇಳೆ ನಿಯಮಬಾಹಿರವಾಗಿ ಪಕ್ಷಾಂತರ ಮಾಡಿದರೆ ಶಾಸಕ/ಸಂಸದರು ಒಂದು ದಿನ ಕೂಡ ಆ ಹುದ್ದೆಯಲ್ಲಿ ಮುಂದುವರಿಯಲು ಅರ್ಹರಲ್ಲ. ಇಂಥ ಸಂದರ್ಭದಲ್ಲಿ ಅನರ್ಹತೆ ಅರ್ಜಿಗಳನ್ನು ಸಭಾಧ್ಯಕ್ಷರು ಅನಿರ್ದಿಷ್ಟ ಅವಧಿಗೆ ಬಾಕಿ ಇಟ್ಟುಕೊಂಡು ಕೂಡದೇ ಕಾಲಮಿತಿಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು. ಸ್ಪೀಕರ್ ಅವರು 3 ತಿಂಗಳೊಳಗೆ ಇಂಥ ಅರ್ಜಿಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಉತ್ತಮ' ಎಂದು ಹೇಳಿತು.

ಇನ್ನು ಮಣಿಪುರ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ ಪೀಠ, 'ಮಣಿಪುರ ವಿಧಾನಸಭಾಧ್ಯಕ್ಷರು ಸಚಿವ ಶ್ಯಾಮಕುಮಾರ್ ಅನರ್ಹತೆಗೆ ಸಲ್ಲಿಸಲಾಗಿರುವ ಅರ್ಜಿಗಳನ್ನು 4 ವಾರದಲ್ಲಿ ವಿಲೇವಾರಿ ಮಾಡಬೇಕು. ಒಂದು ವೇಳೆ 4 ವಾರದಲ್ಲಿ ಇತ್ಯರ್ಥವಾಗದೇ ಹೋದರೆ, ಅನರ್ಹತೆ ಕೋರಿ ಅರ್ಜಿ ಸಲ್ಲಿಸಿರುವ ಇಬ್ಬರು ಕಾಂಗ್ರೆಸ್ ಶಾಸಕರು ಪುನಃ ಸುಪ್ರೀಂ ಕೋರ್ಟ್‌ಗೆ ಬರಬಹುದು' ಎಂದು ನ್ಯಾ। ನಾರಿಮನ್ ಹೇಳಿದರು.